MAY 01, 2024

ALL INDIA RADIO- DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ದೇಶದ ಸರ್ವತೋಮುಖ ಬೆಳವಣಿಗೆ ಅನುಲಕ್ಷಿಸಿ, ಮತ ಚಲಾಯಿಸಿ – ಮುಖ್ಯಮಂತ್ರಿ ಸಿದ್ದರಾಮಯ್ಯ, ಮನವಿ.
- ಪ್ರಾದೇಶಿಕ ಆಶೋತ್ತರಗಳಿಗೆ, ಬಿಜೆಪಿ ಮನ್ನಣೆ – ಜೆ.ಪಿ. ನಡ್ಡಾ, ಅಭಿಮತ.
- 18ನೇ ಲೋಕಸಭೆ ಚುನಾವಣೆ; ಎರಡನೇ ಹಂತದ ಮೇ 7ರ ಮತದಾನಕ್ಕೆ, ಕಟ್ಟುನಿಟ್ಟಾದ ನೀತಿ ಸಂಹಿತೆ.
- ಪರಿಸರ ಸ್ನೇಹಿ ಮಣ್ಣಿನ ಆಟಿಕೆಗಳ, ಸ್ಟಾರ್ಟ್‌ಅಪ್ ಕಂಪನಿ, ಧಾರವಾಡ 'ತಿಗರಿ ಟಾಯ್ಸ್'ಗೆ ಅಂತಾರಾಷ್ಟ್ರೀಯ ಬೇಡಿಕೆ.

<><><>

ಈಗ ವಾರ್ತೆಗಳ ವಿವರ

<><><>

ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಮತದಾರರು, ತಮ್ಮ ಹಕ್ಕು ಚಲಾಯಿಸಬೇಕು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಬೆಳಗಾವಿ ಜಿಲ್ಲೆ, ಗೋಕಾಕ್‌ನಲ್ಲಿ ಆಯೋಜಿಸಿದ್ದ, ಪ್ರಜಾಧ್ವನಿ – 2 ಕಾಂಗ್ರೆಸ್ ಅಭ್ಯರ್ಥಿಪರ ಪ್ರಚಾರ ಸಭೆಯಲ್ಲಿ ಭಾಗಿಯಾಗಿ, ಪಕ್ಷದ ಅಭ್ಯರ್ಥಿಗಳ ಪರ ಅವರು ಪ್ರಚಾರ ನಡೆಸಿದರು. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ, ಜನರು ನೀಡುವ ಮತದಾನದ ತೀರ್ಪು, ದೇಶದ ಭವಿಷ್ಯವನ್ನು ನಿರ್ಧರಿಸಲಿದೆ ಎಂದರು.

<><><>

ಏಕತೆಯಲ್ಲಿ ವೈವಿಧ್ಯತೆಯನ್ನು ಬಿಜೆಪಿ ಗೌರವಿಸುತ್ತದೆ. ಪ್ರಾದೇಶಿಕ ಆಶೋತ್ತರ ಹಾಗೂ ಭಾವನೆಗಳಿಗೆ ಮನ್ನಣೆ ನೀಡುತ್ತದೆ ಎಂದು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದ್ದಾರೆ. ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ಪ್ರಬುದ್ಧರ ಸಭೆಯನ್ನುದ್ದೇಶಿಸಿ, ಅವರು ಮಾತನಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಒಂದು ದಶಕದ ಆಡಳಿತಾವಧಿಯಲ್ಲಿ, ಭಾರತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದೆ.

ಎಲ್ಲ ವಲಯಗಳಲ್ಲಿ ಪ್ರಗತಿ ಹಾಗೂ ಬದಲಾವಣೆ ಕಂಡುಬಂದಿದೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್; ಸಬ್ ಕಾ ವಿಶ್ವಾಸ್ ಮಂತ್ರ, ದೇಶವನ್ನು ಏಕ ಸೂತ್ರದಲ್ಲಿ ಬಂಧಿಸಿದೆ ಎಂದರು.

<><><>

ಕಲಬುರಗಿ ಲೋಕಸಭಾ ಕ್ಷೇತ್ರದ, ಕಮಲಾಪುರದಲ್ಲಿ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭಾಗಿಯಾಗಿ, ಪಕ್ಷದ ಅಭ್ಯರ್ಥಿ ಪರ ಮತ ಯಾಚಿಸಿದರು.

<><><>

ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ, ದ್ವೇಷದ ಹೇಳಿಕೆ ಪ್ರಕಟಿಸಿದ ಆರೋಪದ ಮೇಲೆ, ಬಿ.ಜೆ.ಪಿ ನಾಯಕ ಸಿ.ಟಿ ರವಿ ವಿರುದ್ಧ, ಚಿಕ್ಕ ಮಗಳೂರಿನಲ್ಲಿ ಚುನಾವಣಾಧಿಕಾರಿಗಳು, ದೂರು ಆಧರಿಸಿ, ಪ್ರಕರಣ ದಾಖಲಿಸಿದ್ದಾರೆ.

<><><>

ಇಂದು ಸಂಜೆ 5:45ಕ್ಕೆ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ, ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಶಾ, ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಪರ, ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ, ಮಾತನಾಡುವರು.

<><><>

ಇದಕ್ಕೂ ಮುನ್ನ, 3:45ಕ್ಕೆ ಹಾವೇರಿ ಜಿಲ್ಲೆ ರಾಣೆಬೆನ್ನೂರಿನಲ್ಲಿ ಮಾರ್ಗ ಪ್ರದರ್ಶನದಲ್ಲಿ ಅವರು ಭಾಗವಹಿಸಲಿದ್ದಾರೆ.

<><><>

ಇಂದಿನಿಂದ ಮೂರು ದಿನ, ಲೋಕಸಭಾ ಚುನಾವಣೆ ನಿಮಿತ್ತ, ಅಗತ್ಯ ಸೇವೆಗಳ ಕರ್ತವ್ಯದ ಮೇಲೆ, ನಿಯೋಜಿತರಾದ ಎಲ್ಲ ಸಿಬ್ಬಂದಿಗೆ, ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಹಾಗೂ ಮಧ್ಯ ಕರ್ನಾಟಕ ಭಾಗದ, 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ, 14 ಜಿಲ್ಲೆಗಳಲ್ಲಿ, ಆಯಾ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಮತದಾನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಳಗಾವಿ ಜಿಲ್ಲೆ ಚುನಾವಣಾಧಿಕಾರಿ ನಿತೇಶ್ ಪಾಟೀಲ.

<><><>

ನಿತೇಶ್ ಪಾಟೀಲ ಧ್ವನಿ 50 ಸೆಕೆಂದುಗಳು

<><><>

18ನೇ ಲೋಕಸಭೆ ಚುನಾವಣೆ ಹಿನ್ನೆಲೆ, ರಾಜ್ಯದ ಎರಡನೇ ಹಂತದ ಮತದಾನಕ್ಕೆ ಸಂಬಂಧಿಸಿ, ಜಾರಿಯಲ್ಲಿರುವ ಮಾದರಿ ನೀತಿ ಸಂಹಿತೆಯನ್ನು, ಎಲ್ಲ 14 ಲೋಕಸಭಾ ಕ್ಷೇತ್ರಗಳಲ್ಲಿ ಕಟ್ಟುನಿಟ್ಟಾಗಿ ನಿರ್ವಹಿಸಲಾಗುತ್ತಿದೆ ಎಂದು ನಮ್ಮ ಜಿಲ್ಲಾವಾರು ಪ್ರತಿನಿಧಿಗಳು ವರದಿ ಮಾಡಿದ್ದಾರೆ. ಸಿ–ವಿಜಿಲ್ ಆ್ಯಪ್ ಮೂಲಕ ಇದು ವರೆಗೆ, ನಾಗರಿಕರು, 28 ಸಾವಿರದ 971 ಚುನಾವಣಾ ಸಂಬಂಧಿ ದೂರುಗಳನ್ನು, ದಾಖಲಿಸಿದ್ದಾರೆ. ಆ ಪೈಕಿ, 27 ಸಾವಿರದ 319 ಪ್ರಕರಣಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಹಾಗೂ ಸಹಾಯವಾಣಿ 1–9–5–0 ಮೂಲಕ, ಇದು ವರೆಗೆ, 35 ಸಾವಿರದ 715 ಕರೆಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಲಾಗಿದೆ ಎಂದು, ಚುನಾವಣಾ ಆಯೋಗ ತಿಳಿಸಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮೇ 7 ಮಂಗಳವಾರ, ಲೋಕಸಭೆ 2ನೇ ಹಂತದ ಮತದಾನದಲ್ಲಿ, ಪ್ರಥಮ ಬಾರಿಗೆ ಮತ ಚಲಾಯಿಸಲಿರುವ, ಗಣನೀಯ ಸಂಖ್ಯೆಯ ಯುವ ಮತದಾರರಲ್ಲಿ, ಪಿ.ಯೂ.ಸಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣಗೊಂಡ ವಿಜಯಪುರದ ವಿದ್ಯಾರ್ಥಿ, ನಚಿಕೇತ ಪತ್ತಾರ ಸಹ ಒಬ್ಬರು. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ವ್ಯಕ್ತ ಪಡಿಸಿದ್ದಾರೆ.

<><><>

ನಚಿಕೇತ ಪತ್ತಾರ ಧ್ವನಿ 24 ಸೆಕೆಂದುಗಳು

<><><>

ಸರ್ವಾನುಮತದಿಂದ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು, ಜೆಡಿಎಸ್ ಪಕ್ಷದದಿಂದ, ಅಮಾನತುಗೊಳಿಸಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ತಿಳಿಸಿದ್ದಾರೆ.

<><><>

ಈ ಮಧ್ಯೆ, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮ ಅವರು, ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದು, ಆರೋಪಿಗಳನ್ನು ಬಂಧಿಸುವಂತೆ, ಕೋರಿದ್ದಾರೆ. ಹಾಸನ ಲೋಕಸಭಾ ಕ್ಷೇತ್ರದ ಸಂಸದ, ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾಗಿರುವ, ಲೈಂಗಿಕ ದೌರ್ಜನ್ಯದ ವಿಡಿಯೋ ಪ್ರಕರಣದ ವರದಿಯನ್ನು, ಮೂರು ದಿನಗಳಲ್ಲಿ ಸಲ್ಲಿಸುವಂತೆ, ರಾಷ್ಟ್ರೀಯ ಮಹಿಳಾ ಆಯೋಗ, ಕರ್ನಾಟಕದ ಡಿಜಿ–ಐಜಿಪಿ ಅವರಿಗೆ ನೋಟಿಸ್ ನೀಡಿದೆ.

<><><>

ಕೇಂದ್ರದ ಗೃಹ ಖಾತೆ ಸಚಿವ ಅಮಿತ್ ಶಾ, ಅಸ್ಸಾಂನ ಗುವಾಹಟಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಾತೃ ಶಕ್ತಿಯನ್ನು ಅಪಮಾನಿಸುವುದು, ಸಹಿಸಲಸಾಧ್ಯ. ಪ್ರಜ್ವಲ್ ರೇವಣ್ಣ ಕುರಿತಾದ ವಿಡಿಯೊ ಒಪ್ಪಲು ಸಾಧ್ಯವಿಲ್ಲ; ಮಹಿಳೆಯರನ್ನು ಗೌರವಿಸುವುದು, ಬಿಜೆಪಿ ಸಂಸ್ಕೃತಿ ಎಂದು ಹೇಳಿದರು.

<><><>

ಧಾರವಾಡ ತಾಲೂಕು, ಮುಗದ ಗ್ರಾಮದ, ದ್ರಾಕ್ಷಾಯಣಿ ಕುಂಬಾರ, ವೃತ್ತಿಯಿಂದ ಶಾಲಾ ಶಿಕ್ಷಕಿ. ಆದರೆ ಪ್ರವೃತ್ತಿಯಿಂದ ಪರಿಸರ ಸ್ನೇಹಿ ಮಣ್ಣಿನ ಆಟಿಕೆಗಳನ್ನು ರೂಪಿಸುವ ಸ್ಟಾರ್ಟ್‌ಅಪ್ ಕಂಪನಿ, 'ತಿಗರಿ ಟಾಯ್ಸ್' ಸಂಸ್ಥಾಪಕಿ.ತಮ್ಮ ತಂದೆ ತಾಯಿಯಿಂದ ಬಳುವಳಿಯಾಗಿ ಬಂದ ಕುಂಬಾರಿಕೆಗೆ, ಆಧುನಿಕತೆಯ ಸ್ಪರ್ಶ ನೀಡಿ, ದೇಶ–ವಿದೇಶಗಳಿಗೂ ಮಣ್ಣಿನ ಸಾಂಪ್ರದಾಯಿಕ ಆಟಿಕೆಗಳನ್ನು ತಲುಪಿಸುವಲ್ಲಿ, ಯುವ ಉದ್ಯಮಿ ದ್ರಾಕ್ಷಾಯಣಿ ಕುಂಬಾರ ಯಶಸ್ವಿಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ದ್ರಾಕ್ಷಾಯಣಿ ಕುಂಬಾರ ಧ್ವನಿ 50 ಸೆಕೆಂದುಗಳು

<><><>

ವಿಶ್ವವಿದ್ಯಾಲಯ ಧನ ಸಹಾಯ ಆಯೋಗ – ಯು.ಜಿ.ಸಿ. ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ–ಎನ್.ಇ.ಟಿ, ಜೂನ್ 16ರ ಬದಲು, ಜೂನ್ 18ಕ್ಕೆ ಮುಂದೂಡಲ್ಪಟ್ಟಿದೆ ಎಂದು, ಯು.ಜಿ.ಸಿ. ಅಧ್ಯಕ್ಷ ಎಂ.ಜಗದೀಶ್ ಕುಮಾರ್ ತಿಳಿಸಿದ್ದಾರೆ. ದೇಶಾದ್ಯಂತ ಒಂದೇ ದಿನ, ಒ.ಎಂ.ಆರ್ ಮಾದರಿಯಲ್ಲಿ, ಯು.ಜಿ.ಸಿ–ಎನ್.ಇ.ಟಿ ಪರೀಕ್ಷೆ ನಡೆಸಲಾಗುವುದು; ಶೀಘ್ರದಲ್ಲೇ ಅಧಿಕೃತ ಅಧಿಸೂಚನೆ ಪ್ರಕಟಿಸಲಾಗುವುದು ಎಂದು, ಅವರು ಹೇಳಿದ್ದಾರೆ.

<><><>

ಚಾಮರಾಜನಗರ ಸಂಸದರಾಗಿದ್ದ, ವಿ.ಶ್ರೀನಿವಾಸ್ ಪ್ರಸಾದ್ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಬೌದ್ಧ ಧರ್ಮದ ವಿಧಿವಿಧಾನಗಳೊಂದಿಗೆ, ಮೈಸೂರು – ಮಾನಂದವಾಡಿ ರಸ್ತೆಯ, ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಕಲ್ಚರಲ್ ಆಂಡ್ ಎಜ್ಯುಕೇಷನ್ ಟ್ರಸ್ಟ್ ಆವರಣದಲ್ಲಿ, ಸರ್ಕಾರಿ ಗೌರವಗಳೊಂದಿಗೆ, ನೆರವೇರಿತು. ಪೂಜ್ಯ ಆನಂದ ಬಂತೇಜಿ, ಮನೋರಂಕಿತ ಬಂತೇಜಿ ನೇತೃತ್ವದಲ್ಲಿ, 15 ಜನ ಬೌದ್ಧ ಭಿಕ್ಕುಗಳು, ಅಂತಿಮ ವಿಧಿ ವಿಧಾನಗಳಿಗೆ, ಮಾರ್ಗದರ್ಶನ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಹೆಚ್.ಸಿ. ಮಹದೇವಪ್ಪ, ಸಂಸದ ಪ್ರತಾಪ್ ಸಿಂಹ ಸೇರಿದಂತೆ, ಹಲವು ಗಣ್ಯರು ಪಾಲ್ಗೊಂಡಿದ್ದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು ಮೇ 1. ಅಂತಾರಾಷ್ಟ್ರೀಯ ಕಾರ್ಮಿಕರ ದಿನ. ಶ್ರಮ ಸಂಸ್ಕೃತಿಯನ್ನು ಗೌರವಿಸಿ, ಶ್ರಮಿಕರ ದಿನವನ್ನು ಆಚರಿಸುವ ದಿನ.

<><><>

ಶ್ರೀ ಗುರು ತೇಗ್ ಬಹದ್ದೂರ್ ಅವರ, ಪರ್ಕಾಶ್ ಪುರಬ್ ಪವಿತ್ರ ದಿನದ ಅಂಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ನಮನ ಸಲ್ಲಿಸಿದ್ದಾರೆ.

<><><>

ನೌಕಾ ಪಡೆಯ ಮುಖ್ಯಸ್ಥರಾಗಿ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ, ಹೊಸ ದಿಲ್ಲಿಯಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ.

<><><>

ಹವಾಮಾನ ಇಲಾಖೆ, ಮುನ್ಸೂಚನೆಯಂತೆ, ಉತ್ತರಕನ್ನಡ ಜಿಲ್ಲೆಯಲ್ಲಿ, ಇಂದಿನಿಂದ ಮೇ 7ರ ವರೆಗೆ, ತಾಪಮಾನ 33 ರಿಂದ 40 ಡಿಗ್ರಿ ಸೆಲ್ಸಿಯಸ್ ವ್ಯತ್ಯಾಸವಾಗುವ ಸಾಧ್ಯತೆ ಇದೆ. ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

<><><>

ರಾಯಚೂರಿನಲ್ಲಿ ಮಂಗಳವಾರ, 45 ದಶಾಂಶ 6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಇದು ಕಳೆದ ಒಂದು ದಶಕದಲ್ಲೇ ರಾಯಚೂರಿನಲ್ಲಿ ಏಪ್ರಿಲ್‌ನಲ್ಲಿ ದಾಖಲಾದ ಅತೀ ಗರಿಷ್ಠ ತಾಪಮಾನವಾಗಿದೆ.

<><><>

ಕಲಬುರಗಿ ನಗರಕ್ಕೆ ಭೀಮಾ ನದಿಯಿಂದ ಕಲುಷಿತ ನೀರು ಪೂರೈಕೆಯಾಗುತ್ತಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ಕ್ರಮವಾಗಿ, ಕಾಯಿಸಿ, ಆರಿಸಿದ ನೀರು ಕುಡಿಯುವಂತೆ, ಜಿಲ್ಲಾಡಳಿತ ಮನವಿ ಮಾಡಿದೆ.

<><><>

ಚಿತ್ರದುರ್ಗದಲ್ಲಿ, 142 ಹಜ್ ಯಾತ್ರಾರ್ಥಿಗಳಿಗೆ, ಸುರಕ್ಷಾ ಲಸಿಕಾ ಅಭಿಯಾನ ನಡೆಸಲಾಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ದೇಶದ ಸರ್ವತೋಮುಖ ಬೆಳವಣಿಗೆ ಅನುಲಕ್ಷಿಸಿ, ಮತ ಚಲಾಯಿಸಿ – ಮುಖ್ಯಮಂತ್ರಿ ಸಿದ್ದರಾಮಯ್ಯ, ಮನವಿ.
- ಪ್ರಾದೇಶಿಕ ಆಶೋತ್ತರ ಹಾಗೂ ಭಾವನೆಗಳಿಗೆ, ಬಿಜೆಪಿ ಮನ್ನಣೆ – ಜೆ.ಪಿ. ನಡ್ಡಾ, ಅಭಿಮತ.

- 18ನೇ ಲೋಕಸಭೆ ಚುನಾವಣೆ; ಎರಡನೇ ಹಂತದ ಮೇ 7ರ ಮತದಾನಕ್ಕೆ, ಕಟ್ಟುನಿಟ್ಟಾದ ನೀತಿ ಸಂಹಿತೆ.
- ಪರಿಸರ ಸ್ನೇಹಿ ಮಣ್ಣಿನ ಆಟಿಕೆಗಳ, ಸ್ಟಾರ್ಟ್‌ಅಪ್ ಕಂಪನಿ, 'ತಿಗರಿ ಟಾಯ್ಸ್'ಗೆ ಅಂತಾರಾಷ್ಟ್ರೀಯ ಬೇಡಿಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ರ್ಷ

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>